**ಅ. ದಾ. ಸಂ. 189/2021**

**ಪಿ.ಡಬ್ಲ್ಯೂ - 01**

**ದಿನಾಂಕ-26-03-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ 1 ರಿಂದ 5ನೇ ಪ್ರತಿವಾದಿಗಳ ಪರ ಶ್ರೀ. ಎಲ್.ಪಿ.ಎಸ್, ವಕೀಲರಿಂದ-**

ವಾದಿಗೆ ಗ್ಯಾಂಗ್ರಿನ್ ಆಗಿದೆ ಮತ್ತು ಅವರಿಗೆ ನಡೆದಾಡಲು ಆಗದೇ ಇರುವ ಕಾರಣದಿಂದ ನನಗೆ ಈ ದಾವೆಯನ್ನು ನಡೆಸಲು ವಿಶೇಷ ಅಧಿಕಾರ ಪತ್ರವನ್ನು ನೀಡಿದ್ದಾರೆ. ವಾದಿಗೆ ಒಬ್ಬ ಮಗ ಮತ್ತು ಮಗಳು ಇದ್ದಾರೆ. ವಾದಿಯು ನನ್ನ ಚಿಕ್ಕಪ್ಪ. ನಾನು ಮತ್ತು ವಾದಿಯು ಒಟ್ಟು ಕುಟುಂಬದಲ್ಲಿ ಇರುವುದಿಲ್ಲ. ಕಳೆದ 12 ರಿಂದ 15 ವರ್ಷಗಳಿಂದ ನಾನು ಮತ್ತು ವಾದಿಯು ಪ್ರತ್ಯೇಕವಾಗಿ ವಾಸಿಸುತ್ತೀದ್ದೇವೆ. ವಾದಿಯು ಅನಾರೋಗ್ಯದಿಂದ ಬಳಲುತ್ತಿದ್ದಾರೆಂದು ತೋರಿಸಲು ನಾನು ನ್ಯಾಯಾಲಯಕ್ಕೆ ಯಾವುದೇ ವೈದ್ಯಕೀಯ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ವಾದಿಯು ಆರೋಗ್ಯವಾಗಿದ್ದಾರೆ ಮತ್ತು ಅವರು ಅನಾರೋಗ್ಯದಿಂದ ಬಳಲುತ್ತಿದ್ದರೆ ನೀವು ನ್ಯಾಯಾಲಯಕ್ಕೆ ವೈದ್ಯಕೀಯ ದಾಖಲೆಗಳನ್ನು ಹಾಜರುಮಾಡಿರುತೀರಾ ಎಂದರೆ ಸಾಕ್ಷಿಯು ಮುಂದಿನ ದಿನದಲ್ಲಿ ನ್ಯಾಯಾಲಯಕ್ಕೆ ವೈದ್ಯಕೀಯ ದಾಖಲೆಗಳನ್ನು ಹಾಜರುಪಡಿಸುತ್ತೇನೆ ಎನ್ನುತ್ತಾರೆ. ವಾದಿಯ ಮಗನಿಗೆ 18 ವರ್ಷ ಆಗಿಲ್ಲದ ಕಾರಣ ವಾದಿಯು ನನಗೆ ವಿಶೇಷ ಅಧಿಕಾರ ಪತ್ರವನ್ನು ನೀಡಿರುತ್ತಾರೆ. ವಾದಿಯು ನ್ಯಾಯಾಲಯಕ್ಷಕ ಬಂದರೆ ಸತ್ಯಾಂಶ ಹೊರಬೀಳುತ್ತದೆ ಎಂಬ ಉದ್ದೇಶದಿಂದ ನಿಮಗೆ ನಿಪಿ-1 ರಂತೆ ಸುಳ್ಳು ಅಧಿಕಾರ ಪತ್ರವನ್ನು ನೀಡಿದ್ದಾರೆ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ.

2. ವಾದಿಯ ಸ್ವಾಧೀನಕ್ಕೆ ತೊಂದರೆಯನ್ನು ನೀಡಿದ ಕಾರಣ ವಾದಿಯು ಈ ದಾವೆಯನ್ನು ಸಲ್ಲಿಸಿರುತ್ತಾರೆ. ವಾದಾ ಸ್ವತ್ತಿನ ಸರ್ವೆ ನಂ. 108/63 ಆಗಿದೆ. ಈಗ ಸರ್ವೆನಂಬರ್ ಗಳನ್ನು ಒಟ್ಟುಗೂಡಿಸಿ ದಾವಾ ಸ್ವತ್ತಿನ ಸರ್ವೆನಂ. 108

ಆಗಿದೆ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಸರ್ವೆ ನಂ.108 ಮೂಲತಃ ಗೋಮಾಳದ ಜಾಗ ಆಗಿರುತ್ತದೆ ಮತ್ತು ಅದರ ಒಟ್ಟು ವಿಸ್ತೀರ್ಣ 252 ಎಕರೆ 52 ಗುಂಟೆ ಆಗಿದೆ. ದಾವಾ ಸ್ವತ್‌ತು ನನ್ನ ತಾತನಾದ ನರಸಯ್ಯನವರಿಗೆ 1956-57 ನೇ ಇಸವಿಯಲ್ಲಿ ದರ್ಕಾಸ್ ಮೂಲಕ ಸರ್ಕಾರದಿಂದ ಮಂಜೂರಾಗಿರುತ್ತದೆ ಮತ್ತು ಅವರಿಂದ ವಾದಿಗೆ ಬಂದಿರುತ್ತದೆ. ದಾವಾ ಸ್ವತ್ತು ಮಂಜೂರು ಮಾಡುವ 5-6 ವರ್ಷಗಳ ಮುಂಚೆಯಿಂದಲೇ ನನ್ನ ತಾತನವರು ದಾವಾ ಸ್ವತ್ತಿನ ಸ್ವಾಧೀನದಲ್ಲಿ ಇದ್ದರು. ನನ್ನ ಬಳಿ ದಾವಾ ಸ್ವತ್ತು ನನ್ನ ತಾತನವರ ಹೆಸರಿಗೆ ಮಂಜೂರಾಗಿದೆ ಎಂದು ತೋರಿಸಲು ಗ್ರಾಂಟ್ ಸರ್ಟಿಪಿಕೇಟ್ ಮತ್ತು ನನ್ನ ತಾತನವರು ಸಲ್ಲಿಸಿರುವ ಅರ್ಜಿ ಇರುವುದಿಲ್ಲ, ಆದರೆ ಮ್ಯುಟೇಷನ್ ರಿಜಿಸ್ಟರ್ ಇರುತ್ತದೆ. ಗ್ರಾಂಟ್ ಸರ್ಟಿಪಿಕೇಟ್ ಮತ್ತು ಅರ್ಜಿಯನ್ನು ಪಡೆದುಕೊಳ್ಳಲು ನಾನು ತಾಲ್ಲೂಕು ಕಛೇರಿಗೆ ಅರ್ಜಿಯನ್ನು ಸಲ್ಲಿಸಿರುತ್ತೇನೆ, ಆದರೆ ಅವರ ಬಳಿ ಸದರಿ ದಾಖಲೆಗಳು ಇರುವುದಿಲ್ಲ.

3. ದಾವಾ ಸ್ವತ್ತು ನಿಮ್ಮ ತಾತನವರ ಹೆಸರಿಗೆ ಮಂಜೂರಾಗಿದ್ದೇ ಆದ ಪಕ್ಷದಲ್ಲಿ ನಿಮ್ಮ ಬಳಿ ಮತ್ತು ತಾಲ್ಲೂಕು ಕಛೇರಿಯಲ್ಲಿ ಸಂಬಂದಪಟ್ಟ ದಾಖಲೆಗಳು ಇರುತಿತ್ತು ಎಂದರೆ ಸಾಕ್ಷಿಯು ದಾವಾ ಸ್ವತ್ತು ತನ್ನ ತಾತನಿಗೆ ಮಂಜೂರಾಗಿದೆ ಎನ್ನುತ್ತಾರೆ. 1956-57 ನೇ ಸಾಲಿನಲ್ಲಿ ನನ್ನ ತಾತನವರ ಹೆಸರಿಗೆ ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ಖಾತೆ ಆಗಿರುತ್ತದೆ. ಸದರಿ ಖಾತೆಯನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. 2004 ರಲ್ಲಿ ನನ್ನ ತಾತನವರು ಮೃತಪಟ್ಟಿರುತ್ತಾರೆ. ದಾವಾ ಸ್ವತ್ತನ್ನು ನನ್ನ ತಾತನ ಹೆಸರಿಗೆ ಮಂಜೂರು ಮಾಡುವ ಮೊದಲು ಮತ್ತು ನಂತರ ತಾಹಶೀಲ್ದಾರ್ ರವರು ಬಂದು ಅಳತೆಯನ್ನು ಮಾಡಿ ಜಾಗವನ್ನು ಕೊಟ್ಟಿರುತ್ತಾರೆ. ಸದರಿ ಅಳತೆ ಕಾರ್ಯಕ್ಕೆ ಸಂಬಂದಿಸಿದಂತೆ ನಾನು ನ್ಯಾಯಾಲಯಕ್ಕೆ ದಾಖಲೆಯನ್ನು ಹಾಜರುಪಡಿಸಿದ್ದೇನೆ.

**ಅ. ದಾ. ಸಂ. 189/2021**
**ಪಿ.ಡಬ್ಲ್ಯೂ - 01**

ಈಗ ಸಾಕ್ಷಿಗೆ ತಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವ ದಾಖಲೆಗಳ ಪಟ್ಟಿಯನ್ನು ತೋರಿಸಿ ಅದರಲ್ಲಿ, ಯಾವುದು ಅಳತೆ ಕಾರ್ಯಕ್ಕೆ ಸಂಬಂಧಿಸಿದ ದಾಖಲೆ ಆಗಿದೆ ಎಂದರೆ ಸಾಕ್ಷಿಯು ಸದರಿ ದಾಖಲೆಯನ್ನು ಸರ್ಕಾರದವರು ಇಟ್ಟುಕೊಂಡಿದ್ದಾರೆ ಎನ್ನುತ್ತಾರೆ. ನಾನು ಸದರಿ ದಾಖಲೆಯನ್ನು ಆರ್.ಟಿ.ಐ ಮುಖಾಂತರ ಪಡೆದುಕೊಂಡಿದ್ದೇನೆ ಮತ್ತು ಅದನ್ನು ಮುಂದಿನ ದಿನಾಂಕದಂದು ನ್ಯಾಯಾಲಯಕ್ಕೆ ಹಾಜರುಪಡಿಸುತ್ತೇನೆ.

**ಈ ಹಂತದಲ್ಲಿ ಮುಂದುವರಿದ ಪಾಟೀ ಸವಾಲಿಗೆ ಸಮಯಕೋರಿದ್ದು ಸಮಯ ನೀಡಲಾಯಿತು.**

**ಓ. ಹೇ. ಕೇ. ಸ. ಇ. ಎ. ಓಪ್ಪಿರುತ್ತಾರೆ,**

**2 ನೇ ಅ. ಸಿ. ಜ. ಮತ್ತು ಜೆ.ಎಂ.ಎಫ್.ಸಿ,**
**ಮಾಗಡಿ**